11.	ಗುಲ್ಬರ್ಗಾ	10,41,185
12.	ಹಾಸನ	8,21,593
13.	ಕೊಡಗು	1,81,786
14.	ಕೋಲಾರ	6,79,384
15.	ಮಂಡ್ಯ	5,34,495
16.	ಮೈಸೂರು	6,50,442
17.	ರಾಯಚೂರು	5,54,222
18.	ಶಿವಮೊಗ್ಗ	8,01,567
19.	ತುಮಕೂರು	8,67,036
20.	ಉತ್ತರ ಕನ್ನಡ	5,53,823
21.	ಬಾಗಲಕೋಟೆ	4,69,891
22.	ಚಾಮರಾಜ ನಗರ	3,61,805
23.	ದಾವಣಗೆರೆ	6,01,508
24.	ಗದಗ್	3,04,755
25.	ಹಾವೇರಿ	4,64,818
26.	ಕೊಪ್ಪಳ	3,50,256
27.	ಉಡುಪಿ	4,72,857
	ಒಟ್ಟು	1,51,98,313

ಭಾಲ್ಕಿ ತಾಲ್ಲೂಕಿನ ಮಹಾತ್ಮಗಾಂಧಿ ಸಕ್ಕರೆ ಕಾರ್ಖಾನೆಯಲ್ಲಿ ಸಿಬ್ಬಂದಿಗಳ ನೇಮಕಾತಿ

3123 (3587) : ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಮಹಾತ್ಮಗಾಂಧಿ ಸಕ್ಕರೆ ಕಾರ್ಖಾನೆಯಲ್ಲಿ ನೇಮಕಗೊಳ್ಳುತ್ತಿರುವ ಹುದ್ದೆಗಳು ಮರಿಟ್ ಹಾಗೂ ರೋಸ್ಟರ್‌ನಲ್ಲಿ ನೇಮಕಾತಿ ಯಾಗುತ್ತಿದೆಯೆ;

ಆ) ಇಲ್ಲದಿದ್ದರೆ, ಯಾವ ಪದ್ಧತಿಯಲ್ಲಿ ಹುದ್ದೆಯನ್ನು ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ?

ಶ್ರೀ ಎಚ್. ವಿಶ್ವನಾಥ್ (ಸಹಕಾರ ಸಚಿವರು):

ಅ) ದಿ ಮಾಹಾತ್ಮಗಾಂಧಿ ಸಹಕಾರಿ ಸಕ್ಕರೆ ಕಾರ್ಖಾನೆ (ನಿ), ಭಾಲ್ಕಿ ಬೀದರ್ ಜಿಲ್ಲೆ ಇದು ಹೊಸದಾಗಿ ಸ್ಥಾಪನೆಗೊಂಡ ಕಾರ್ಖಾನೆಯಾಗಿದ್ದು, ಸೆಪ್ಟೆಂಬರ್–ಅಕ್ಟೋಬರ್ 2003ರಲ್ಲಿ ಕಬ್ಬು ನುರಿಸುವ ಹಂಗಾಮನ್ನು ಪ್ರಾರಂಭಿಸಲು ಕಾರ್ಖಾನೆಯು ಉದ್ದೇಶಿಸಿರುತ್ತದೆ. ಕಾರ್ಖಾನೆಯ ವ್ಯಂದಬಲ ಹಾಗೂ ವೇತನ ಶ್ರೇಣಿಗೆ ಸರ್ಕಾರದ ಅನುಮತಿಗಾಗಿ ಕಾರ್ಖಾನೆಯು ಪ್ರಸ್ತಾವನೆ ಸಲ್ಲಿಸಿದ್ದು, ಅದು ಪರಿಶೀಲನೆಯ ಹಂತದಲ್ಲಿದೆ. ಈ ಬಗ್ಗೆ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 17ರನ್ವಯ ಸರ್ಕಾರದ ಅನುಮೋದನೆ ದೊರೆತ ನಂತರ ಅದಕ್ಕನುಗುಣವಾಗಿ, ಕಾರ್ಖಾನೆಯಲ್ಲಿ ನೇಮಕಾಗಿ ಪ್ರಕ್ರಿಯೆ ಪ್ರಾರಂಭಿಸಬೇಕಾಗಿದೆ. ಆದ್ದರಿಂದ ಕಾರ್ಖಾನೆಯಲ್ಲಿ ಸದ್ಯಕ್ಕೆ ಯಾವುದೇ ನೇಮಕಾತಿ ಪ್ರಾರಂಭಿಸಿರುವುದಿಲ್ಲ.

ಆ) ನೇಮಕಾತಿ ಮಾಡಿಕೊಳ್ಳುವಾಗ ನಿಯಮಾನುಸಾರ ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡ ಮತ್ತು ಇತರ ಹಿಂದುಳಿದ ವರ್ಗಗಳಿಗೆ ಮೀಸಲಾತಿಯ ಪ್ರಕಾರ ನೇಮಕ ಮಾಡಿಕೊಳ್ಳುವಲ್ಲಿ ಬರುತ್ತದೆ.

ಭಾಲ್ಕಿ ತಾಲ್ಲೂಕಿನ ಮಹಾತ್ಮಗಾಂಧಿ ಸಕ್ಕರೆ ಕಾರ್ಖಾನೆಯ ಷೇರು ಹಣ

3124 (3588) : ಶ್ರೀ ಪ್ರಕಾಶ್ ಖಂಡ್ರೆ ಭಾಲ್ಕಿ ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಜಿಲ್ಲೆ ಭಾಲ್ಕಿ ತಾಲ್ಲೂಕಿನಲ್ಲಿ ಮಹಾತ್ಮಗಾಂಧಿ ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿ ಸರ್ಕಾರದ ವತಿಯಿಂದ ಯಾವುದಾದರೂ ವಿಚಾರಣೆ ನಡೆಯುತ್ತಿದೆಯೇ; ನಡೆಯುತ್ತಿದ್ದರೆ ಯಾವ ಹಂತದಲ್ಲಿದೆ;

ಆ) ಮಹಾತ್ಮಗಾಂಧಿ ಸಕ್ಕರೆ ಕಾರ್ಖಾನೆಯಲ್ಲಿ ಒಟ್ಟು ಪಡೆದಿರುವ ಷೇರು ಹಣ ಎಷ್ಟು ಮತ್ತು ಎಷ್ಟು ಜನರಿಗೆ ಹಣದ ಪಾವತಿ ಮತ್ತು ಷೇರು ಸರ್ಟಿಫಿಕೇಟ್ ಕೊಡಲಾಗಿದೆ ಹಾಗೂ ಎಷ್ಟು ಜನರಿಗೆ ಹಣದ ಪಾವತಿ ಕೊಟ್ಟಿರುವುದಿಲ್ಲ;

ಇ) ಎಷ್ಟು ಜನರಿಗೆ ಷೇರು ಸರ್ಟಿಫಿಕೇಟ್ ಕೊಡಬೇಕು; ಕೊಡದಿದ್ದರೆ ಕಾರಣಗಳೇನು?

ಶ್ರೀ ಎಚ್. ವಿಶ್ವನಾಥ್ (ಸಹಕಾರ ಸಚಿವರು):

ಅ) ಪ್ರಾಥಮಿಕ ವಿಚಾರಣೆಯನ್ನು ಪ್ರಾರಂಭಿಸಲಾಗಿದೆ. ಅಧಿಕಾರಿಗಳ ತಂಡವೊಂದು ಸ್ಥಳಕ್ಕೆ ಭೇಟಿ ನೀಡಿರುತ್ತದೆ ಮತ್ತು ಕೆಲವೊಂದು ಮಾಹಿತಿಯನ್ನು ಸಂಗ್ರಹಿಸಿರುತ್ತದೆ.

ಆ) ಇ) ಜನವರಿ 2003ರ ಅಂತ್ಯಕ್ಕೆ ಕಾರ್ಖಾನೆಯು ರೂ.5.49 ಕೋಟಿ ಶೇರು ಹಣ ಸಂಗ್ರಹಿಸಿದೆ. 2003ರ ಜನವರಿ ಅಂತ್ಯಕ್ಕೆ 3950 ಮಂದಿ ಸದಸ್ಯರಿಗೆ ಕಾರ್ಖಾನೆಯು ಶೇರು ಪತ್ರಗಳನ್ನು ನೀಡಿರುತ್ತದೆ. ಇನ್ನೂ 8365 ಮಂದಿ ಸದಸ್ಯರಿಗೆ ಶೇರು ಪತ್ರ ನೀಡಬೇಕಾಗಿದ್ದು, ಸದಸ್ಯರಿಂದ ಅವಶ್ಯಕವಾದ ಪಹಣಿ ನಕಲು ಮತ್ತು ಫೋಟೋ ಇತ್ಯಾದಿಗಳನ್ನು ಸಂಗ್ರಹಿಸಲಾಗುತ್ತಿದ್ದು ಶೇರು ಪತ್ರ ನೀಡುವ ಕಾರ್ಯ ಪ್ರಗತಿಯಲ್ಲಿದೆ. ಇನ್ನೂ ಶೇರು ಪತ್ರಗಳನ್ನು ವಿತರಿಸಬೇಕಾದ ಎಲ್ಲಾ ಶೇರು ವಂಚಿತರಾದವರಿಗೆ ಕಾರ್ಖಾನೆ ವತಿಯಿಂದ ದಿನಪತ್ರಿಕೆಗಳಲ್ಲಿ ಶೇರು ಪತ್ರಕ್ಕಾಗಿ ಬೇಕಾದ ಪಹಣಿ ನಕಲು ಮತ್ತು ಭಾವಚಿತ್ರ ಸಲ್ಲಿಸಲು ದಿನಾಂಕ 22.8.2002ರಂದು ಕಾರಂಜ ಎಕ್ಸ್‌ಪ್ರೆಸ್ ಮತ್ತು ಬೀದರ್ ಕೀ ಆವಾಜ್ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗಿದೆ. ಈ ಪ್ರಕಟಣೆಯ ಪ್ರಕಾರ ರೈತರು ಕಾರ್ಖಾನೆಯ ತಮ್ಮ ಷೇರು ಪತ್ರಕ್ಕೆ ಬೇಕಾದ ಎಲ್ಲಾ ಮಾಹಿತಿಯನ್ನು ಸಲ್ಲಿಸುತ್ತಿದ್ದು ಕಾರ್ಖಾನೆಯವರು ಹಳ್ಳಿಹಳ್ಳಿಗೆ ಹೋಗಿ ರೈತರ ಪಹಣಿ ನಕಲು ಹಾಗೂ ಭಾವಚಿತ್ರಗಳನ್ನು ಸಂಗ್ರಹಿಸಿ ಷೇರು ಪತ್ರ ನೀಡುವ ಕಾರ್ಯವು ತೀವ್ರಗತಿಯಲ್ಲಿ ಜಾರಿಯಲ್ಲಿರುತ್ತದೆ.

ಆಳಂದ ತಾಲ್ಲೂಕಿನ ಬೂಸನೂರು ಸಕ್ಕರೆ ಕಾರ್ಖಾನೆಯ ನೌಕರರ ಸ್ಥಿತಿ-ಗತಿ

3126 (3450) : ಶ್ರೀ ರೇವುನಾಯಕ್ ಬೆಳಮಗಿ (ಕಮಲಪೂರ್) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿರುವ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು; ಅವು ಯಾವುದು;

ಆ) ಆಳಂದ ತಾಲ್ಲೂಕಿನ ಭೂಸನೂರ ಸಕ್ಕರೆ ಕಾರ್ಖಾನೆಯಲ್ಲಿರುವ ಖಾಯಂ ಹಾಗೂ ದಿನಗೂಲಿ ನೌಕರರ ಸಂಖ್ಯೆ ಎಷ್ಟು; ದಿನಗೂಲಿ ನೌಕರರುಗಳು ಎಷ್ಟು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ; ಇವರುಗಳನ್ನು ಖಾಯಂಗೊಳಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ; ಹೇಗೆ;